**ದಿನಾಂಕ: 31–05–2012 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಹಾಗೂ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಮತ್ತು ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | |
|---|---|---|---|---|
| 1 | **ಶ್ರೀ.ವೈ.ಎನ್.ಅಶ್ವಥ್** | ಅಧ್ಯಕ್ಷರು | 1 | ಉಪ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ) & (ದಕ್ಷಿಣ) |
| 2 | ಶ್ರೀ.ಎನ್.ಚಂದ್ರಶೇಖರ್‌ರಾಜು | ಸದಸ್ಯರು | 2 | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ) & (ದಕ್ಷಿಣ) |
| 3 | ಶ್ರೀ.ಎಂ.ಸಿ.ಶ್ರೀನಿವಾಸ್ | | 3 | ವಲಯ ಅರಣ್ಯಾಧಿಕಾರಿಗಳು – **(ಪೂರ್ವ/ ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ ರಾ.ರಾ.ನಗರ)** |
| 4 | ಶ್ರೀಮತಿ.ಶಕುಂತಲ.ಎನ್ | ಸದಸ್ಯರು | 4 | |
| 5 | ಶ್ರೀಮತಿ.ನಂದಿನಿ.ಕೆ | ಸದಸ್ಯರು | 5 | ಕಾರ್ಯಪಾಲಕ ಅಭಿಯಂತರರು (ಯೋಜನೆ–ಕೆರೆಗಳು) |
| 6 | ಶ್ರೀಮತಿ.ಲಕ್ಷ್ಮಿ | ಸದಸ್ಯರು | 6 | ತೋಟಗಾರಿಕೆ ಅಧೀಕ್ಷಕರು – **(ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾ.ರಾ.ನಗರ)** |
| 7 | ಶ್ರೀ.ಎಸ್.ಗಂಗಾಧರ್ | ಸದಸ್ಯರು | | |
| 8 | ಶ್ರೀಮತಿ.ಸೀಮಾ ಖಾನಂ | ಸದಸ್ಯರು | 7 | ಕಾರ್ಯಪಾಲಕ ಅಭಿಯಂತರರು (ಯೋಜನೆ– **(ಪೂರ್ವ/ ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ ರಾ.ರಾ.ನಗರ)** |
| 9 | ಶ್ರೀ.ಎಮ್.ಶಿವರಾಜು | ಸದಸ್ಯರು | | |
| 10 | ಶ್ರೀಮತಿ.ಸರಳ | ಸದಸ್ಯರು | | |
| 11. | ಶ್ರೀ.ತಿಮ್ಮರಾಜು | ಸದಸ್ಯರು | | |

**ಮಾನ್ಯ ಆಧ್ಯಕ್ಷರು** ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿ, ಹಾಜರಿರುವ ಎಲ್ಲಾ ಅಧಿಕಾರಿಗಳು ಮತ್ತು ಸಮಿತಿ ಸದಸ್ಯರು ತಮ್ಮ ತಮ್ಮ ಪರಿಚಯವನ್ನು ಸಭೆಗೆ ಮಾಡಿಕೊಡುವಂತೆ ಸೂಚಿಸಿದರು. ಅದರಂತೆ, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳು ತಮ್ಮ ತಮ್ಮ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು.

ತದನಂತರ, ಅಧ್ಯಕ್ಷರು ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ಅಭಿವೃದ್ಧಿ, ನಿರ್ವಹಣೆ ಹಾಗೂ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಮತ್ತು ಕೆರೆಗಳ ಅಭಿವೃದ್ಧಿ ಬಗ್ಗೆ ಕಾರ್ಯನಿರ್ವಹಿಸಲು ಅಧಿಕಾರಿಗಳ ಸಲಹೆ, ಸೂಚನೆಗಳು ಸಮಿತಿಗೆ ಅಮೂಲ್ಯವಾಗಿದ್ದು, ಅಧಿಕಾರಿಗಳು ತಮ್ಮ ಸಲಹೆ ಸಹಕಾರಗಳನ್ನು ಸಮಿತಿಗೆ ನೀಡುವಂತೆ ಹಾಗೂ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸಲು ಯಾವುದೇ ಕುಂದುಕೊರತೆಗಳಿದ್ದರೂ ಸಹ ಸಮಿತಿಗೆ ವರದಿ ಮಾಡುವಂತೆ ಸೂಚಿಸಿದರು. ಸಮಿತಿಯಲ್ಲಿ ಉತ್ತಮ ಗುಣಮಟ್ಟದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ತಮ್ಮೆಲ್ಲರ ಸಲಹೆ, ಸಹಕಾರಗಳು ಅತ್ಯಮೂಲ್ಯವಾಗಿದ್ದು, ಜೊತೆಗೆ ಸಮಿತಿಯ ಸಹಕಾರವು ಇರುತ್ತದೆಂದು ತಿಳಿಸಿದರು.

ಪಾಲಿಕೆ ವ್ಯಾಪ್ತಿಯ 198 ವಾರ್ಡ್‌ಗಳ ರಸ್ತೆ ಬದಿಯಲ್ಲಿ ಬರುವ ಅಪಾಯಕಾರಿ ಮರಗಳು, ಒಣಗಿರುವ ಮರಗಳು, ಅಪಾಯಕಾರಿ ರೆಂಬೆಗಳು, ಶಿಥಿಲಗೊಂಡಿರುವ ಹಳೆಯ ಮರಗಳು ಹಾಗೂ ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುವಂತಹ ಮರಗಳನ್ನು ಮುಂಜಾಗ್ರತಾ

ಕ್ರಮವಾಗಿ ಮುಂಗಾರು ಮಳೆ ಪ್ರಾರಂಭವಾಗುವ ಮುನ್ನವೇ ಗುರುತಿಸಿ ತೆರವುಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳಲ್ಲಿ ಕಸಕಡ್ಡಿಗಳ ರಾಶಿಗಳನ್ನು ತೆರವುಗೊಳಿಸಿ, ದನಕರುಗಳು ಉದ್ಯಾನವನಕ್ಕೆ ಹೋಗದಂತೆ ತಡೆಗಟ್ಟಿ, ಸಮರ್ಪಕವಾಗಿ ಉದ್ಯಾನವನಗಳನ್ನು ನಿರ್ವಹಣೆ ಮಾಡುವಂತೆ ಸೂಚಿಸಿದರು.

**ಶ್ರೀ.ಸುಬ್ಬಣ್ಣ, ತೋಟಗಾರಿಕೆ ಅಧೀಕ್ಷಕರು(ದಕ್ಷಿಣ)** ರವರು ಮಾತನಾಡುತ್ತಾ, ಉದ್ಯಾನವನಗಳ ನಿರ್ವಹಣೆಗೆ ಹೆಚ್ಚಿನ ಗಮನಹರಿಸಬೇಕಾಗುತ್ತದೆ. ಆದರೆ, ಉದ್ಯಾನವನದಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ಕಳೆದ ಎರಡು ವರ್ಷಗಳಿಂದ ನೀಡುತ್ತಿರುವ ದರಗಳನ್ನು ಈಗಲೂ ಸಹ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಆದುದರಿಂದ, ನಿರ್ವಹಣೆ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ತೊಂದರೆಯಾಗುತ್ತಿದ್ದು, ವೇತನ ದರಗಳನ್ನು ಹೆಚ್ಚು ಮಾಡಿದರೆ ಉದ್ಯಾನವನಗಳ ನಿರ್ವಹಣೆಯಲ್ಲಿ ಉತ್ತಮ ಫಲಿತಾಂಶ ಕಾಣುತ್ತದೆಂದು ಮನವಿ ಮಾಡಿದರು. ಜಾಬ್ ಕೋಡ್ ನೀಡುವ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಆಯುಕ್ತರು ಒಂದು ಸುತ್ತೋಲೆಯನ್ನು ಹೊರಡಿಸಿದ್ದು, ಅದರಲ್ಲಿ ವಿಧಿಸಿರುವ ಷರತ್ತಿನ ಪ್ರಕಾರ ಜಾಬ್ ಕೋಡ್ ಅಪ್ರೂವ್ ಮಾಡಿಸಿಕೊಳ್ಳಲು ತುಂಬಾ ತೊಂದರೆಯಾಗಿದ್ದು, ಇದರಿಂದ ಹಲವು ಕಾಮಗಾರಿಗಳು ಪೂರ್ತಿಯಾಗಿದ್ದರೂ ಸಹ ವೇತನ ನೀಡಲು ಕಷ್ಟವಾಗಿರುವುದರಿಂದ, ಮೇಲಾಧಿಕಾರಿಗಳೊಂದಿಗೆ ಈ ಬಗ್ಗೆ ಚರ್ಚಿಸಿ ಸುತ್ತೋಲೆಯನ್ನು ಹಿಂಪಡೆದು ಜಾಬ್‌ಕೋಡ್ ನೀಡಲು ಶಿಫಾರಸ್ಸು ಮಾಡಬೇಕೆಂದು ಮನವಿ ಮಾಡಿದರು.

**ಶ್ರೀಮತಿ.ಶಕುಂತಲಾ, ಸದಸ್ಯರು,** ಮಾತನಾಡುತ್ತಾ, ಕೆರೆಗಳು–ಪರಿಸರ ಕೋಶ ಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳು ಸಭೆಗೆ ಹಾಜರಿಲ್ಲದ ಬಗ್ಗೆ ಪ್ರಶ್ನಿಸಿ, ಎಲ್ಲಾ ಅಧಿಕಾರಿಗಳಿಗೂ ಸಭೆಯ ತಿಳುವಳಿಕೆ ಪತ್ರ ತಲುಪಿರುತ್ತದೆ. ಆದರೂ ಸಹ ಸಭೆಗೆ ಕೆಲವು ಅಧಿಕಾರಿಗಳು ಹಾಜರಾಗುವುದಿಲ್ಲ. ಆದುದರಿಂದ, ಸಭೆಯ ತಿಳುವಳಿಕೆ ಪತ್ರ ತಲುಪಿದ ಎಲ್ಲಾ ಅಧಿಕಾರಿಗಳು ಸಭೆಯಲ್ಲಿ ಹಾಜರಿರುವಂತೆ ಸೂಚಿಸಬೇಕೆಂದು ಅಧ್ಯಕ್ಷರಿಗೆ ಮನವಿ ಮಾಡಿದರು.

**ಶ್ರೀ.ಕೃಷ್ಣಪ್ಪ, ಉಪ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ)** ರವರು ಮಾತನಾಡುತ್ತಾ, ಕೆರೆಗಳು–ಪರಿಸರ ಕೋಶಕ್ಕೆ ಸಂಬಂಧಪಟ್ಟ ಕಛೇರಿಯು ಸ್ಥಳಾಂತರಗೊಳ್ಳುತ್ತಿರುವುದರಿಂದ, ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಹಾಜರಾಗಲಿಲ್ಲವೆಂದು ತಿಳಿಸಿದರು.

ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಸಮಿತಿಯಿಂದ ಸಭೆಯ ತಿಳುವಳಿಕೆ ಪತ್ರವನ್ನು ಒಂದು ವಾರಕ್ಕೆ ಮುಂಚಿತವಾಗಿ ಹೊರಡಿಸಿದ್ದು, ಸಭೆಯ ತಿಳುವಳಿಕೆ ಪತ್ರದಲ್ಲಿ ಸೂಚಿಸುವ ಎಲ್ಲಾ ಅಧಿಕಾರಿಗಳು ನಿಗಧಿತ ಸಮಯದೊಳಗೆ ಸಭೆಗೆ ಹಾಜರಿರುವಂತೆ ಹಾಗೂ ವಿನಾ ಕಾರಣ ಸಭೆಗೆ ಗೈರುಹಾಜರಾಗುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದೆಂದು ಸೂಚಿಸಿದರು.

**ಅಧ್ಯಕ್ಷರು** ಮಾತನಾಡುತ್ತಾ, ಫ್ರೀಡಂ ಪಾರ್ಕ್‌ನಲ್ಲಿ ಖಾಸಗಿ ವಾಹನಗಳ ನಿಲುಗಡೆ ಮಾಡಿರುವ ಬಗ್ಗೆ ಹಾಗೂ ಉದ್ಯಾನವನದಲ್ಲಿ ಅನಧಿಕೃತವಾಗಿ ಗುಡಿಸಲುಗಳನ್ನು ಹಾಕಿರುವ ಕುರಿತು ಮಾಧ್ಯಮಗಳಲ್ಲಿ, ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸಮಿತಿಗೆ ವರದಿ ನೀಡುವಂತೆ ಸೂಚಿಸಿದರು.

**ಶ್ರೀ.ಶಿವಪ್ರಸಾದ್‌ರೆಡ್ಡಿ, ತೋಟಗಾರಿಕೆ ಅಧೀಕ್ಷಕರು(ಪಶ್ಚಿಮ)** ರವರು ಮಾತನಾಡುತ್ತಾ, ಫ್ರೀಡಂ ಪಾರ್ಕ್‌ನಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿ ಮತ್ತು ನೌಕರರು ಮಾತ್ರ ವಾಹನಗಳನ್ನು ನಿಲ್ಲಿಸಿರುತ್ತಾರೆ ಹಾಗೂ ಉದ್ಯಾನವನದಲ್ಲಿ ಕಾಮಗಾರಿ ಕೆಲಸ ನಡೆಯುತ್ತಿದ್ದು, ಅಲ್ಲಿನ ಕೂಲಿಕಾರ್ಮಿಕರು ನಾಲ್ಕೈದು ಗುಡಿಸಲುಗಳನ್ನು ನಿರ್ಮಿಸಿಕೊಂಡಿದ್ದು, ಕಾಮಗಾರಿಯು ಪೂರ್ಣಗೊಂಡ ನಂತರ ಗುಡಿಸಲುಗಳನ್ನು ತೆರವುಗೊಳಿಸುತ್ತಾರೆಂದು ತಿಳಿಸಿದರು.

2010–11 ಮತ್ತು 2011–12ನೇ ಸಾಲಿನಲ್ಲಿ ಈಗಾಗಲೇ ಕಾಮಗಾರಿಗಳನ್ನು ಪೂರ್ಣಗೊಳಿಸಿ ಅಭಿವೃದ್ಧಿಗೊಳಿಸಿರುವ ವಿವರ ಹಾಗೂ ದಿನಾಂಕ:31–05–2012 ರವರೆಗೆ ಹಣ ಪಾವತಿಗಾಗಿ ಬಾಕಿ ಇರುವ ಬಿಲ್ಲುಗಳ ಕಾಮಗಾರಿ ವಿವರವನ್ನು ಸಮಿತಿಗೆ ಒದಗಿಸುವಂತೆ ಸೂಚಿಸಿದರು.

ಹಾಲಿ ಪ್ರಗತಿಯಲ್ಲಿ ನಿರ್ವಹಿಸುತ್ತಿರುವ ಕಾಮಗಾರಿಗಳ ವಿವರ ಹಾಗೂ ಜೊತೆಗೆ ಶಾಸಕರ ಅನುದಾನ ಮತ್ತು ಸದಸ್ಯರುಗಳ ವಾರ್ಡ್ ಅನುದಾನದಲ್ಲಿ ಕಾಮಗಾರಿ ನಿರ್ವಹಿಸುತ್ತಿರುವ ಉದ್ಯಾನವನಗಳ ಅಭಿವೃದ್ಧಿಗಳ ವಿವರವನ್ನು ಸಮಿತಿಗೆ ಒದಗಿಸುವಂತೆ ಸೂಚಿಸಿದರು.

ದಿನಾಂಕ:05–06–2012 ರಂದು **"ವಿಶ್ವ ಪರಿಸರ ದಿನಾಚರಣೆ"**ಯ ಅಂಗವಾಗಿ ವಲಯ ಅರಣ್ಯಾಧಿಕಾರಿಗಳು ಎಲ್ಲಾ ವಾರ್ಡ್ ಸದಸ್ಯರುಗಳೊಂದಿಗೆ ಸಸಿ ಹಾಗೂ ವೃಕ್ಷಕವಚಗಳನ್ನು ಬಳಸಿಕೊಂಡು, ಎಲ್ಲಾ ವಾರ್ಡ್‌ಗಳಲ್ಲಿ ಸಸಿಗಳನ್ನು ನೆಡುವ ಮೂಲಕ ಸಾಂಕೇತಿಕವಾಗಿ, ಉತ್ತಮವಾಗಿ, ಸೂಕ್ತ ರೀತಿಯಲ್ಲಿ **"ವಿಶ್ವ ಪರಿಸರ ದಿನಾಚರಣೆ"** ಯನ್ನು ಆಚರಿಸಬೇಕೆಂದು ಅಧ್ಯಕ್ಷರು ಸೂಚಿಸಿದರು.

ಟೆಂಡರ್ ಪ್ರಕ್ರಿಯೆಯಲ್ಲಿರುವ ಕಾಮಗಾರಿ ಕಡತಗಳು ಯಾವ ಯಾವ ಹಂತದಲ್ಲಿವೆ ಎಂಬುದರ ಬಗ್ಗೆ ಕಡತಗಳ ವಿವರ, ಜೊತೆಗೆ ಶಾಸಕರ ಅನುದಾನ ಮತ್ತು ಪೂಜ್ಯ ಮಹಾಪೌರರ ಅನುದಾನ ಹಾಗೂ ಸದಸ್ಯರುಗಳ ವಾರ್ಡ್ ಅನುದಾನಕ್ಕೆ ಸಂಬಂಧಪಟ್ಟ ಕಡತಗಳ ವಿವರವನ್ನು ಸಮಿತಿಗೆ ಒದಗಿಸುವಂತೆ ಸೂಚಿಸಿದರು.

2012–13ನೇ ಸಾಲಿನಲ್ಲಿ ಕೈಗೊಳ್ಳಬೇಕಾಗಿರುವ ಕಾಮಗಾರಿಗಳನ್ನು ಆಯವ್ಯಯದಲ್ಲಿ ಕಾಯ್ದಿರಿಸಿ, ಅಭಿವೃದ್ಧಿಗೊಳಿಸಬೇಕಾಗಿರುವ ಕಾಮಗಾರಿಗಳ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸಮಿತಿಗೆ ಒದಗಿಸುವಂತೆ ಸೂಚಿಸಿದರು. ಸಿದ್ಧಪಡಿಸಿದ ಪ್ರಸ್ತಾವನೆಯನ್ನು ಸಮಿತಿಯು ಪರಿಶೀಲಿಸಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ 2012–13ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಿಕೊಳ್ಳಲು ಶಿಫಾರಸ್ಸು ಮಾಡಲಾಗುವುದೆಂದು ಸೂಚಿಸಿದರು.

ಸಮಿತಿಯ ಸಭೆಯಲ್ಲಿ ಕೇಳಿರುವ ವಿವರಗಳಿಗೆ ಒಂದು ವಾರದೊಳಗೆ ಸಮಿತಿಗೆ ವಲಯವಾರು ಹಾಗೂ ಇಲಾಖಾವಾರು ಮಾಹಿತಿಯನ್ನು ಒದಗಿಸುವಂತೆ ಸೂಚಿಸಿದರು.

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆ ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸುವಂತೆ ಸುತ್ತೋಲೆ ಹೊರಡಿಸಿ ಕಾರ್ಯಪ್ರವೃತ್ತರಾಗಬೇಕೆಂದು ಮಾನ್ಯ ಆಯುಕ್ತರನ್ನು ಕೋರುತ್ತಾ, ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- *ವಿಶೇಷ ಆಯುಕ್ತರು(ಯೋಜನೆ) ರವರ ಗಮನಕ್ಕೆ ತರಲಾಗಿದೆ.*
- *ಅಪರ ಆಯುಕ್ತರು(ಯೋಜನೆ)ರವರ ಗಮನಕ್ಕೆ ತರಲಾಗಿದೆ.*
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ ಕಳುಹಿಸಲಾಗಿದೆ.
- ಪ್ರಧಾನ ಅಭಿಯಂತರವರಿಗೆ ಕಳುಹಿಸಲಾಗಿದೆ.
- ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಕಳುಹಿಸಲಾಗಿದೆ.
- ಮುಖ್ಯ ಲೆಕ್ಕಾಧಿಕಾರಿಗಳಿಗೆ ಕಳುಹಿಸಲಾಗಿದೆ.
- ಉಪ /ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು(ಉತ್ತರ-ದಕ್ಷಿಣ) ರವರಿಗೆ ಕಳುಹಿಸಲಾಗಿದೆ.
- ಕಾ.ಪಾ.ಅ.(ಕೆರೆಗಳು-ಪರಿಸರ ಕೋಶ 1, 2, 3, 4, 5,) ರವರಿಗೆ ಕಳುಹಿಸಲಾಗಿದೆ.
- ಕಾರ್ಯಪಾಲಕ ಅಭಿಯಂತರರು(ಯೋಜನೆ-(ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ / ಮಹದೇವಪುರ) ರವರಿಗೆ ಕಳುಹಿಸಲಾಗಿದೆ.
- ತೋಟಗಾರಿಕೆ ಅಧೀಕ್ಷಕರು (ಪೂರ್ವ/ ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಲಾಗಿದೆ.
- ವಲಯ ಅರಣ್ಯಾಧಿಕಾರಿಗಳು(ಪೂರ್ವ/ ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಲಾಗಿದೆ.
- ಕಛೇರಿ ಪ್ರತಿ.